ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 338 (305) |
| ಉತ್ತರಿಸುವ ದಿನಾಂಕ | 21-12-2022 |
| ಮಾನ್ಯ ಸದಸ್ಯರ ಹೆಸರು | ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಯಾದಗಿರಿ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಆರ್.ಟಿ.ಸಿಯಲ್ಲಿರುವ ಭೂ ಮಾಲೀಕರುಗಳ ಹೆಸರಿಗೆ ಹೊಂದಾಣಿಕೆಯಾಗುವಂತೆ ನಕಲಿ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಗಳನ್ನು ಬಳಸಿ ಜಮೀನುಗಳನ್ನು ಮೂಲ ಮಾಲೀಕರುಗಳಿಗೆ ತಿಳಿಯದಂತೆ ಅಕ್ರಮವಾಗಿ ನೋಂದಣಿ ಯಾಗುತ್ತಿರುವ ಪ್ರಕರಣಗಳು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಶಹಾಪೂರ ತಾಲ್ಲೂಕಿನ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಒಂದು ಪ್ರಕರಣ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವ ವರದಿಯನ್ವಯ ತಿಳಿದು ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಪಕ್ಷಗಾರರಿಗೆ ನೋಟೀಸ್ ಜಾರಿ ಮಾಡಿ ಸೂಕ್ತ ದಾಖಲೆಗಳ ಸಾಕ್ಷಿಯೊಂದಿಗೆ ಲಿಖಿತವಾಗಿ ಅಥವಾ ಮೌಖಿಕವಾಗಿ ಹೇಳಿಕೆ ನೀಡಲು ಸೂಚಿಸಲಾಗಿತ್ತು. ಕಳುಹಿಸಿದ ನೋಟೀಸ್ ಅನ್ನು ಸ್ವೀಕರಿಸದೇ ಮರಳಿ ಬಂದಿದ್ದು, 2ನೇ ನೋಟೀಸ್ ಅನ್ನು ಜಾರಿಮಾಡಲಾಗಿರುತ್ತದೆ, ಸದರಿ ನೋಟೀಸ್‌ಗೆ ಉತ್ತರ ಬಾರದಿದ್ದಲ್ಲಿ ಪಕ್ಷಕಾರರ ವಿರುದ್ಧ ನೋಂದಣಿ ಕಾಯ್ದೆ1908ರ ಕಲಂ 82 ಮತ್ತು 83 ರಡಿ ಕ್ರಮ ಜರುಗಿಸಲಾಗುವುದು. |
| ಇ) | ಯಾದಗಿರಿ ಜಿಲ್ಲೆಯಲ್ಲಿ ನಕಲಿ ದಾಖಲೆಗಳನ್ನು ಬಳಸಿ ಅಕ್ರಮವಾಗಿ ನೋಂದಣಿಯಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರವನ್ನು ನೀಡುವುದು) | ಶಹಾಪೂರ ತಾಲ್ಲೂಕಿನ ಉಪ ನೋಂದಣಿ ಕಛೇರಿಯಲ್ಲಿ ಒಂದು ದಸ್ತಾವೇಜು ನೋಂದಣಿ ಯಾಗಿರುತ್ತದೆ. |
| ಈ) | ಯಾದಗಿರಿ ಜಿಲ್ಲೆ ವಡಗೇರಾ ತಾಲ್ಲೂಕು ತುಮಕೂರು ಗ್ರಾಮದ ಸರ್ವೆ ನಂ.32 ರಲ್ಲಿ 19 ಎಕರೆ 37 ಗುಂಟೆ ಜಮೀನು ಅಕ್ರಮ ದಾಖಲೆಗಳ ಮೂಲಕ ನೋಂದಣಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಶಹಾಪೂರ ತಾಲ್ಲೂಕಿನ ಉಪ ನೋಂದಣಿ ಕಛೇರಿಯಲ್ಲಿ ದಿನಾಂಕ:16-09-2022 ರಂದು ದಸ್ತಾವೇಜು ಸಂಖ್ಯೆ:5566/2022-23 ಆಗಿ ನೋಂದಣಿಯಾಗಿರುತ್ತದೆ. ಪುರುಷಾಂತರ/ ಅನುಕರಣೆ (impersonation) ಮಾಡಿ ಆಸ್ತಿ ನೋಂದಾಯಿಸಿರುವ ಕುರಿತು ಮೂಲ ಮಾಲೀಕರಿಂದ ಯಾವುದೇ ರೀತಿಯ ತಕರಾರು ಬಂದಿರುವುದಿಲ್ಲ. ಆದರೆ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವ ವರದಿಯ ಮುಖಾಂತರ ಸದರಿ ವಿಷಯವು ತಿಳಿದು ಬಂದ ನಂತರ ಪಕ್ಷಕಾರರಿಗೆ ಉಪ ನೋಂದಣಾಧಿಕಾರಿ, ಶಹಾಪುರ ರವರು ದಿನಾಂಕ:18-10-2022 ರಂದು ನೋಟೀಸ್ ಜಾರಿ ಮಾಡಿ ಸೂಕ್ತ ದಾಖಲೆಗಳ ಸಾಕ್ಷಿಯೊಂದಿಗೆ ಲಿಖಿತವಾಗಿ ಅಥವಾ ಮೌಖಿಕವಾಗಿ ಸದರಿ ಪ್ರಕರಣದ ಕುರಿತು ಹೇಳಿಕೆ ನೀಡಲು ಸೂಚಿಸಲಾಗಿದೆ. ಈ ರೀತಿ ಕಳುಹಿಸಿದ ನೋಟೀಸ್ ಸ್ವೀಕರಿಸದೇ ಮರಳಿ ಉಪ ನೋಂದಣಿ ಕಛೇರಿಗೆ ಬಂದಿರುತ್ತದೆ. ಆದಾಗ್ಯೂ 2ನೇ ನೋಟೀಸ್ ದಿನಾಂಕ:17-11-2022 ಅನ್ನು ಉಪ ನೋಂದಣಾಧಿಕಾರಿ ರವರು ಜಾರಿ ಮಾಡಿರುತ್ತಾರೆ. ಸದರಿ ನೋಟೀಸಿಗೆ ಉತ್ತರ ಬಾರದಿದ್ದಲ್ಲಿ ಪಕ್ಷಕಾರರ ವಿರುದ್ಧ ನೋಂದಣಿ ಕಾಯ್ದೆ 1908ರ ಕಲಂ 82 ಮತ್ತು 83 ರಡಿ ಕ್ರಮ ಜರುಗಿಸಲಾಗುವುದು. |
| ಉ) | ನಕಲಿ ದಾಖಲೆಗಳನ್ನು ಸೃಷ್ಟಿಸಿ ಅಕ್ರಮವೆಸಗುವ ಜಾಲದೊಂದಿಗೆ ಶಾಮೀಲಾಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಸದರಿ ಪ್ರಕರಣದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯಲ್ಲಿ ಉಪ ನೋಂದಣಾಧಿಕಾರಿಗಳ ವಿರುದ್ಧ ಯಾವುದೇ ದೂರು/ ಆರೋಪವನ್ನು ಪ್ರಕಟಿಸಿರುವುದು ಕಂಡುಬಂದಿರುವುದಿಲ್ಲ ಹಾಗೂ ಈ ಸಂಬಂಧ ಯಾವುದೇ ಲಿಖಿತ ದೂರುಗಳು ನೀಡಿರುವುದು ಕಂಡುಬಂದಿರುವುದಿಲ್ಲ. |

ಸಂಖ್ಯೆ: ಕಂಇ-ಎಂಎನ್ಎಸ್ಎ-403/2022

(ಆರ್.ಅಶೋಕ)
ಕಂದಾಯ ಸಚಿವರು